ವಿದ್ಯಾ ಎನ್. ಪೈ, ಕಾಸರಕೋಡ

ಸಿಟ್ಟು ಒಂದು ಕ್ರಿಯೆಯಲ್ಲ, ಪ್ರತಿಕ್ರಿಯೆ. ಏಕೆ?



ಸಿಟ್ಟು ಮಾಡಿಕೊಳ್ಳುವುದು ಆದ್ದರಿಂದ.

ಎಚ್.ಎಸ್. ರಾಘವೇಂದ್ರ, ಬೆಂಗಳೂರು

ಪದವಿ ಪರೀಕ್ಷೆಯವರೆಗೆ ಸರ್ಕಾರ ಉಚಿತ ಶಿಕ್ಷಣವಿತ್ತರೆ ದೇಶದ ಸಾಕ್ಷರತೆ 100% ತಲುಪುವುದಲ್ಲವೆ?

ಹಾಗಾದರೆ ರ್‍ಯಾಲಿಗೆ ಲಾರಿ ಜನ ಸಿಗುವುದಿಲ್ಲವಾದ್ದರಿಂದ ಮುಖಂಡರೇ ಸಾಕ್ಷರತೆಗೆ ತಡೆಯೊಡ್ಡುತ್ತಾರೆ.

ರಾಜೀವ ಮಾಗಲ್, ಸಕಲೇಶಪುರ

ಬೇಸಿಗೆಯಲ್ಲಿ ರೂಮಲ್ಲಿ ಎ.ಸಿ. ಬಳಸುವ ಜನ ದೇವರಕೋಣೆಯಲ್ಲಿ ಫ್ಯಾನ್ ಕೂಡ ಹಾಕಲ್ಲ...?

ಹನುಮಾನ್ ಚಾಲೀಸ ಪಠಿಸುವರಲ್ಲ, ಮಾರುತಿಯೇ ದೇವತೆಗಳಿಗೆ ಗಾಳಿ ಹಾಕುವನಂತೆ.

ಮೋಹನರಾಜು ಎಸ್.ಎ. ಶಂಕರಘಟ್ಟ

ನಿಜವಾದ ಪ್ರೀತಿ ಯಾವ ಪ್ರತಿಫಲವನ್ನು ನಿರೀಕ್ಷಿಸುತ್ತದೆ?



ನಮ್ಮ ಪ್ರೀತಿಪಾತ್ರರಿಗೆ ಪ್ರತಿಫಲವನ್ನು ನಿರೀಕ್ಷಿಸುತ್ತದೆ.

ಪ್ರೇಮಚಂದ್ರ, ಬೆಂಗಳೂರು

ಭಕ್ತಿ ಅರಿತವನಲ್ಲ, ಮುಕ್ತಿಯೂ ಬೇಕಿಲ್ಲ ಎಂದರೆ ಏನು ರಾಮ್?

ಯಾಚನೆ, ಯೋಚನೆ ಇಲ್ಲದ ಉತ್ಕೃಷ್ಟ ಜೀವನ ಎಂದು.

ಎನ್.ಕೆ. ಹೆಬ್ಬಾರ, ಕೋಣಿ

ಕಲಿಕೆಯಲ್ಲಿ ಹಿಂದೆ, ಹಸಿಸುಳ್ಳು ಹೇಳುವುದರಲ್ಲಿ ನಿಪುಣ ಆದ ನನ್ನ ಮಗನ ಮುಂದಿನ ದಾರಿ?

ಜ್ಯೋತಿಷಿಯಾಗಲಿ. ಉತ್ತಮ ಭವಿಷ್ಯವಿದೆ.

ಬಿ. ಚಂದ್ರೇಗೌಡ, ಬೆಂಗಳೂರು

ಬದುಕಿಗೂ, ಬಂದೂಕಿಗೂ ಏನು ವ್ಯತ್ಯಾಸ?

ಬದುಕು ವಾಕ್ಯ, ಬಂದೂಕು ಫುಲ್ ಸ್ಟಾಪ್.

ಪಿ.ಜೆ. ರಾಘವೇಂದ್ರ, ಮೈಸೂರು

ನನ್ ಮಗನೇ ಅಂತ ಬೈಯೋರು ನನ್ ಮಗಳೇ ಅಂತ ಏಕೆ ಬೈಯೋಲ್ಲ?

ತಾಯಿಯಂತೆ ಮಗಳಲ್ಲವೇ... ಅದೇ ನಾಲಿಗೆ ಎದುರಿಸಬೇಕಾದೀತೆಂಬ ಭಯ!

ಎಸ್ಸೆನ್ಕೆ, ಕಡೂರು

ಬೀರುವಿನಲ್ಲಿ ಬೆಚ್ಚಗೆ ಇಡಲು ಸಾವಿರಾರು ರೂಪಾಯಿ ರೇಷ್ಮೆ ಸೀರೆಗಳನ್ನು ಕೊಳ್ಳಬೇಕೇನು?

ಬೇಡ, ಡೈಮಂಡ್ ಸೆಟ್ಟು, ಮಿಂಕ್ ಕೋಟನ್ನೇ ಕೊಡಿಸಿ! ಕೆಲವೊಮ್ಮೆ ಗರ್ವವಸ್ತ್ರಗಳೂ ಅವಶ್ಯ.

ಮನೋರಮಾ ಎಂ. ಪ್ರಭು, ಕಾಸರಕೋಡ

ಒಬ್ಬ ಮುಖ್ಯಮಂತ್ರಿಗೆ ಮೂವರು ಉಪಮುಖ್ಯಮಂತ್ರಿಗಳು ಏಕೆ?

ಕಾಲೆಳೆಯುವ, ಬುರುಡೆ ಕಾಯಿಸುವ, ಕೈ ಕೊಡುವವರನ್ನು ಕಟ್ಟಿಹಾಕಲು.

ನಾಜ್ಯೋತಿ, ಹೂವಿನಹಡಗಲಿ

ತಾನು ಮಾತ್ರ ನಾಲ್ಕು ಶಿರಗಳನ್ನಿಟ್ಟುಕೊಂಡ ಬ್ರಹ್ಮದೇವ ನಮಗೇಕೆ ಒಂದೇ ಒಂದನ್ನು ಕೊಟ್ಟ?

ಬುವಿಯಲ್ಲಿ ತಲೆ ಕಡಿಮೆ ಇರುವವರೇ ಹೆಚ್ಚು ಸುಖಿಗಳು ಎಂದು ಕಂಡುಕೊಂಡದ್ದರಿಂದ.

ಬೂಕನಕೆರೆ ವಿಜೇಂದ್ರ, ಮೈಸೂರು

ಮಂಡೋದರಿಗಿಂತ ಸೀತೆ ರೂಪವತಿಯೆ?

ಕಾರಣ ಅದಲ್ಲ; ರಾವಣನಿಗಷ್ಟೇ ಅಲ್ಲ, ಬಹುತೇಕ ಗಂಡಸರಿಗೆ ಪರಪತ್ನಿಯೇ ಸುಂದರಿ.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಆಕಳಿಕೆಗೂ, ತೂಕಡಿಕೆಗೂ ವ್ಯತ್ಯಾಸವೇನು?

ಆಕಳಿಕೆ ಅಪಿಟೈಸರ್, ತೂಕಡಿಕೆ ಸ್ಟಾರ್ಟರ್, ನಿದ್ರೆ ಫುಲ್ ಮೀಲ್ಸ್.

ನರಸಿಂಹ ಪೈ, ಹೊನ್ನಾವರ

ಗಾಂಧಿ ಮೆಟ್ಟಿದ ನಾಡಿನಲ್ಲೇಕೆ ಮದ್ಯ ನಿಷೇಧ ಇಲ್ಲ?

ಅದೇ ನಾಡನ್ನೇ ಮಲ್ಯಗಳು, ಖೋಡೆಗಳು, ಖೈತಾನ್‌ಗಳು ಸಹ ಮೆಟ್ಟಿದ್ದರಿಂದ.

## ಬಹುಮಾನಿತ ಪ್ರಶ್ನೆ

ಆರ್. ಮಧುಸೂದನ್, ಹಾಸನ

ಶಂತನು ವಿಲ್ ಬರೆದು ಸತ್ತಿದ್ದರೆ ಮಹಾಭಾರತದಲ್ಲಿ ಬಿಲ್ಲಿನ ಅವಶ್ಯಕತೆ ಇರಲಿಲ್ಲ ಅಲ್ವ?

ವಿಲ್ ಫುಲ್‌ಸ್ಟಾಪು. ಕಾಮಿಗೆ ಕಾಮಾ ತಿಳಿದಿರುತ್ತದೆಯೇ ವಿನಹ ಫುಲ್‌ಸ್ಟಾಪ್ ತಿಳಿದಿರುವುದಿಲ್ಲ.

ವಿ. ಗೋವಿಂದಾಚಾರಿ, ಮೈಸೂರು

ಭಕ್ತರು ಹರಿಹರಿ, ಶಿವಶಿವಾ ಎನ್ನುತ್ತಾರೆ. ಬ್ರಹ್ಮಬ್ರಹ್ಮ ಎಂದೇಕೆ ಅನ್ನುವುದಿಲ್ಲ?

ಅನ್ನದೆಯೇ ಇಷ್ಟು ಜನಸಂಖ್ಯೆ ಸೃಷ್ಟಿ ಆಗಿರುವಾಗ.....

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

ನ್ಯಾಯದೇವತೆ ಏಕೆ ಕಣ್ಣಿಗೆ ಕಪ್ಪು ಬಟ್ಟೆಯನ್ನೇ ಕಟ್ಟಿದ್ದಾಳೆ? ಬೇರೆ ಬಣ್ಣದ್ದು ಕಟ್ಟಬಹುದಿತ್ತಲ್ಲವೆ?

ನ್ಯಾಯದ ಮುಖಕ್ಕೆ ಮಸಿ ಬಳಿಯುವವರೇ ಹೆಚ್ಚಲ್ಲವೇ! ಮಸಿಗೆ ಮ್ಯಾಚಿಂಗ್ ಆಗಲು ಕಪ್ಪು.

ಎ. ಮೃತ್ಯುಂಜಯ, ಪಾಂಡವಪುರ

ಜೀವನದಲ್ಲಿ ಸಾಧಿಸಲು ಆಗದ್ದು ಯಾವುದು?



ಇಡೀ ಭಾರತವು ಪರಿಸರ ಶುಚಿತ್ವ, ರಸ್ತೆ ನಿಯಮ ಪಾಲಿಸುವಂತೆ ಮಾಡುವುದು.

ರತ್ನಾ ರಾಜ್‌ಕುಮಾರ್, ಹಾಸನ

ಮನಸ್ಸಿನಿಂದಲೇ Yಮನಸ್ಸು Yಗುರೂಜಿ?

Yಯ್ಯಾರ, Yಯುಕ್ತಿಕ, Yಚಾರಿಕ, ಅYಜ್ಞಾನಿಕ ವಿಷಯಗಳೇ ಕಾರಣವಂತೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ಪ್ರೀತಿ ಕೊಡುವಷ್ಟು ಕಿಕ್ಕನ್ನು ಮದ್ಯವೂ ಕೊಡುವುದಿಲ್ಲ. ಏಕಿರಬಹುದು?

ಮದ್ಯ ಕೇವಲ ಆವರಿಸುತ್ತದೆ. ಪ್ರೀತಿ ಆವರಿಸುತ್ತದೆ, ಸಾವರಿಸುತ್ತದೆ, ನೇವರಿಸುತ್ತದೆ, ವರಿಸುತ್ತದೆ...

ಪ್ರಶ್ನೆಗಳನ್ನು ಕಳುಹಿಸಿ:
editorsu@sudha.co.in

ರಾಮ್